ಆ) ಆಲ್ ಇಂಡಿಯಾ ರೇಡಿಯೋದಲ್ಲಿ ಕನ್ನಡ ವಾರ್ತೆ ಓದುವಾಗ ಸರಿಯಾಗಿ, ಸ್ಪಷ್ಟವಾಗಿ, ಅರ್ಥ ಬರುವ ರೀತಿಯಲ್ಲಿ ಓದದೆ ಇರುವ ಬಗ್ಗೆ-

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಷಯ ಇದೆ.

ಅಧ್ಯಕ್ಷರು:- ಉತ್ತರ ಕೊಡಬೇಕು ಎನ್ನತಕ್ಕಂಥದ್ದಕ್ಕೆ ಅಬ್ಬಿಗೇಟರಿ ಏನೂ ಇರಲಿಲ್ಲ. ಮಾನ್ಯ ಸಚಿವರು ಉತ್ತರ ಕೊಡುತ್ತೇನೆ ಎಂದು ಹೇಳಿದ್ದಕ್ಕೆ ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಸಿ.ಬೈರೇಗೌಡ(ವೇಮಗಲ್):- ಮಾನ್ಯ ಅಧ್ಯಕ್ಷರೆ, ನಾನು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಬೇರೆ ವಿಚಾರದ ಬಗ್ಗೆ ಮಾತನಾಡಬೇಕಾಗಿದೆ. ನಾನು ಆಲ್ ಇಂಡಿಯಾ ರೇಡಿಯೋದಲ್ಲಿ ಬರತಕ್ಕಂಥ ಕನ್ನಡ ವಾರ್ತೆಯನ್ನು ಪ್ರತಿ ದಿನ ಕೇಳುವ ಅಭ್ಯಾಸ ಇಟ್ಟುಕೊಂಡಿದ್ದೇನೆ. ನಾನು ಹೇಳತಕ್ಕಂಥದನ್ನು ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಗಮನಿಸಬೇಕು. ಬೆಂಗಳೂರಿನಲ್ಲಿ ಓದತಕ್ಕಂಥ ಸುದ್ದಿಯ ಬಗ್ಗೆ ನಾನು ಹೇಳುತ್ತಿಲ್ಲ. ಇವತ್ತಿನ ದಿವಸ ದೆಹಲಿಯಿಂದ ಪ್ರಸಾರವಾಗುತ್ತಿರುವ ಸುದ್ದಿಯನ್ನು ಯಾವರೀತಿಯಾಗಿ ಓದುತ್ತಾರೆ ಎನ್ನತಕ್ಕಂಥದ್ದು ಇವತ್ತಿನದಿವಸ ಒಂದು ಪತ್ರಿಕೆಯಲ್ಲಿ ಬಂದಿದೆ. ಅದು ಆಲ್ ಇಂಡಿಯಾ ರೇಡಿಯೊ ಇರಬಹುದು, ಆಕ್ಷಾಶವಾಣಿ ಇರಬಹುದು.

ಅಧ್ಯಕ್ಷರು:- ಇದಕ್ಕೂ ರಾಜ್ಯ ಸರ್ಕಾರಕ್ಕೂ ಏನು ಸಂಬಂಧವಿದೆ?

ಶ್ರೀ ಸಿ.ಬೈರೇಗೌಡ:- ಆಲ್ ಇಂಡಿಯಾ ರೇಡಿಯೋದಲ್ಲಿ ವಾರ್ತೆಯನ್ನು ಓದತಕ್ಕಂಥವರ ಸ್ವರ ಯಾವ ರೀತಿ ಇರುತ್ತದೆ ಎಂದರೆ ಅದನ್ನು ನಮ್ಮ ಕಿವಿಯಲ್ಲಿ ಕೇಳುವುದಕ್ಕೆ ಆಗುವುದಿಲ್ಲ. ಪ್ರತಿ ಅಕ್ಷರದಲ್ಲಿಯೂ ಕೂಡ ಕನ್ನಡ ಭಾಷೆಯನ್ನು ಕೊಲೆ ಮಾಡತಕ್ಕಂಥದ್ದು ಎದ್ದು ಕಾಣುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹಾಗು ತಮ್ಮ ಗಮನಕ್ಕೆ ತರುವುದು ಏನೆಂದರೆ, ಏಕೆ ಈ ರೀತಿಯಾಗುತ್ತದೆ ಎಂದು ನಾನು ಒಬ್ಬರನ್ನು ಕೇಳಿದ್ದಕ್ಕೆ, ದೆಹಲಿಯಲ್ಲಿ ಸೇರಿಕೊಂಡಿರತಕ್ಕಂಥ ಕೆಲವರಿಗೆ ಕನ್ನಡದ ಗಂಧವೇ ಇಲ್ಲ ಎಂದು ಹೇಳಿದರು. ಇವತ್ತಿನ ದಿವಸ ಕನ್ನಡದ ಗಂಧವೇ ಇಲ್ಲದವರು ದೆಹಲಿಯಲ್ಲಿ ಸೇರಿಕೊಂಡು ಕನ್ನಡವನ್ನು ಓದುತ್ತಿದ್ದಾರೆ.

ಅಧ್ಯಕ್ಷರು:- ಆಲ್ ಇಂಡಿಯಾ ರೇಡಿಯೋ ಸೆಂಟ್ರಲ್ ಗೌರ್ನಮೆಂಟ್‌ಗೆ ಸಂಬಂಧಪಟ್ಟಿದೆ. ಇದಕ್ಕೆ ರಾಜ್ಯ ಸರ್ಕಾರದ ಸಂಬಂಧವಿಲ್ಲ ಎನ್ನತಕ್ಕಂಥದ್ದು ತಮಗೂ ಕೂಡ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಕನ್ನಡ ಭಾಷೆಯ ಉಚ್ಚಾರಣೆ ಸರಿಯಾಗಿ ಇಲ್ಲದಿದ್ದರೆ ಸರಿಯಾಗಿ ಉಚ್ಚಾರಣೆ ಮಾಡಿ ಎಂದು ಪತ್ರ ಬರೆದು ತಿಳಿಸುತ್ತೇನೆ.

ಶ್ರೀ ಸಿ.ಬೈರೇಗೌಡ:- ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕನ್ನಡ ಭಾಷೆಯ ವಾರ್ತೆಯನ್ನು ಬೆಂಗಳೂರಿನಲ್ಲಿಯೇ ಓದುವಂತಾಗಬೇಕು. ಬೆಂಗಳೂರಿನಲ್ಲಿಯೆ ಸುದ್ದಿಯನ್ನು ಓದಬೇಕೆಂದು ಹಿಂದೆ ಒಂದು ಸಾರಿ ತೀರ್ಮಾನ ಆಗಿತ್ತು. ಆದರೆ, ಇದಕ್ಕೆ ದೆಹಲಿಯಲ್ಲಿರತಕ್ಕಂಥ ಕೆಲವರು ತಡೆ ಹಾಕಿದರು. ಇವತ್ತಿನದಿವಸ ದೆಹಲಿಯಿಂದ ಸುದ್ದಿ ಓದತಕ್ಕಂಥವರಿಗೆ ಕನ್ನಡ ಭಾಷೆಯ ಗಂಧವೇ ಗೊತ್ತಿರುವುದಿಲ್ಲ. ಕನ್ನಡದ ಗಂಧವೇ ಇಲ್ಲದಂಥವರಿಂದ ಸುದ್ದಿ ಕೇಳತಕ್ಕಂಥ ಗ್ರಹಚಾರ ನಮಗೆ ಒದಗಿ ಬಂದಿದೆ. ಆದ್ದರಿಂದ, ತಮ್ಮಲ್ಲಿ ಮತ್ತು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಹಾಗೂ ಸಂಬಂಧಪಟ್ಟಂಥ ಮಂತ್ರಿಗಳಾದಂಥ ಮಾನ್ಯ ಕಾಗೋಡು ತಿಮ್ಮಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆಲ್ ಇಂಡಿಯಾ ರೇಡಿಯೋ

ಡೈರೆಕ್ಟರ್ ಜನರಲ್‌ರವರಿಗೆ ಮತ್ತು ಸ್ಟೇಷನ್ ಡೈರೆಕ್ಟರ್‌ರವರಿಗೆ ಪತ್ರ ಬರೆದು ಕನ್ನಡ ಸುದ್ದಿಯನ್ನು ಕೇಳುವಂತೆ ಓದಬೇಕೆಂದು ತಿಳಿಸಿ. ಹಾಗೆಯೇ ಕನ್ನಡದಲ್ಲಿ ಸುದ್ದಿ ಓದತಕ್ಕಂಥದ್ದು ಬೆಂಗಳೂರಿಗೆ ಶಿಫ್ಟ್ ಮಾಡತಕ್ಕಂಥಾದ್ದೂ ಕೂಡ ಆಗಬೇಕು. ಇದನ್ನು ದೆಹಲಿಯಿಂದ ಏಕೆ ಓದಬೇಕು? ಇವತ್ತಿನ ದಿವಸ ಇನ್‌ಫರ್ಮೇಶನ್ ಸಿಸ್ಟಮ್ ಚೆನ್ನಾಗಿ ಬೆಳೆದಿದೆ. ಆದ್ದರಿಂದ, ದೆಹಲಿಯ ಬದಲಾಗಿ ಬೆಂಗಳೂರಿನಿಂದಲೇ ಸುದ್ದಿಯನ್ನು ಓದತಕ್ಕಂಥ ವ್ಯವಸ್ಥೆ ಮಾಡಿದರೆ ಸ್ವಲ್ಪವಾದ ಇಂಪಾದ ಕನ್ನಡವಾದರೂ ರೇಡಿಯೊ ಮೂಲಕ ಬರತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸಂಬಂಧಪಟ್ಟವರಿಗೆ ಪತ್ರ ಬರೆದು ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇ) ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಪುನರ್ ವಿಮರ್ಶೆ ಮಾಡುವ ಬಗ್ಗೆ

+ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):- ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ ಈ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳುತ್ತಿದ್ದೆ. ತಾವು ಈಗ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನರ್ಪಿಸುತ್ತೇನೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಪುನರ್ ವಿಮರ್ಶೆಗೆ ಒಳಪಟ್ಟಿರುವುದರಿಂದ ಮತ್ತೆ ಹೊಸದಾಗಿ ಮಸೂದೆಯನ್ನು ಇವತ್ತು ತರುತ್ತೇವೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಇದರ ಒಂದು ಡ್ರಾಫ್ಟ್ ಕೂಡ ಸಿದ್ಧವಾಗುತ್ತಿದೆ ಎನ್ನತಕ್ಕಂಥದ್ದು ನನಗೆ ತಿಳಿದು ಬಂದಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ನಗರ ಪ್ರದೇಶ ಮತ್ತು ಪಟ್ಟಣ ಪ್ರದೇಶ ಹಾಗೂ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಇವತ್ತಿನದಿವಸ ಸಾಕಷ್ಟು ಗೊಂದಲ ನಿರ್ಮಾಣವಾಗಿದೆ.

12.40 ಪಿಎಂ

ಹಿಂದಿನ ತೆರಿಗೆಯ ವ್ಯವಸ್ಥೆ ರದ್ದಾಗಿದೆ. ಹೊಸ ಒಂದು ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದಿದೆ. ಆದರೆ ಸರ್ಕಾರ ಏನು ಹೇಳಿದೆ, ಹೊಸ ಪದ್ಧತಿಯನ್ನು ನಾವು ರದ್ದುಗೊಳಿಸಿ ಅದನ್ನು ಪುನರ್ ವಿಮರ್ಷೆಗೆ ಒಳಪಡಿಸಿ ಈಗ ಒಂದು ಹೊಸ ಮಸೂದೆಯನ್ನು ತರುತ್ತದೆಂದು ಹೇಳಿದೆ, ಹಾಗಾಗಿ ಸರ್ಕಾರ ಈಗ ಹೊಸ ಮಸೂದೆಯನ್ನು ತರಲಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ, ಅದನ್ನು ಅಗತ್ಯ ತಿದ್ದುಪಡಿಯೊಂದಿಗೆ ತರಲಿ, ಈಗ ರಾಜ್ಯದಲ್ಲಿ ಜನ ಯಾವ ರೀತಿಯಾದ ತೆರಿಗೆಯನ್ನು ಕಟ್ಟಬೇಕು ಎನ್ನುವುದರ ಬಗ್ಗೆ ಗೊಂದಲದಲ್ಲಿದ್ದಾರೆ, ಈ ವರ್ಷದ ತೆರಿಗೆಯನ್ನು ಕಟ್ಟುತ್ತಿದ್ದಾರೆ, ದಿನನಿತ್ಯ ಜಾಹೀರಾತುಗಳು ಬರುತ್ತಿವೆ, ನಗರಸಭೆ ಹಾಗೂ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯಿಂದ, ನೀವು ಹೊಸ ತೆರಿಗೆ ಪದ್ಧತಿಯಲ್ಲಿ ನೀವು ತೆರಿಗೆಯನ್ನು ಕಟ್ಟದೇ ಹೋದರೆ ನಿಮ್ಮ ಮೇಲೆ ದಂಡವನ್ನು ವಿಧಿಸುತ್ತೇವೆಂದು ಹೇಳುತ್ತಿದ್ದಾರೆ. ಹಾಗಾಗಿ ಇಲ್ಲಿ ಹೊಸ ಮಸೂದೆ ಬಂದಿಲ್ಲ, ಹಳೆಯ ಮಸೂದೆ ಕಾನೂನಿನ ಪ್ರಕಾರ ಅಲ್ಲಿ ಅನ್ವಯವಾಗುತ್ತಿದೆ. ಜನರು ದಂಡಕ್ಕೆ ಭಯಭೀತರಾಗಿದ್ದಾರೆ. ಸರ್ಕಾರದಿಂದ ನೀವು ನನಗೆ ಸ್ಪಷ್ಟವಾದ ಒಂದು ನಿರ್ದೇಶನವನ್ನು ಕೊಡಿಸಬೇಕು ಮತ್ತು ಸರ್ಕಾರ ಕೊಡಬೇಕು. ನಾವೇನು ಆಪೇಕ್ಷೆ ಪಡುತ್ತಿದ್ದೇವೆಂದರೆ ಈಗ ಅವರು ಹೊಸ ತೆರಿಗೆಯನ್ನು ಎಷ್ಟು ಕಟ್ಟುತ್ತಾರೋ ಅಷ್ಟನ್ನು ಕಟ್ಟಿಸಿಕೊಳ್ಳಲಿ. ನಾವು